ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001
E-mail ID: icps.kar@gmail.com Ph.No.080-22879383/82

ಅ.ಸ.ಪ.ಸಂಖ್ಯೆ: ಕೆಎಸ್ಐಸಿಪಿಎಸ್/ಕೋವಿಡ್-19/132/2020-21 ದಿನಾಂಕ:22.01.2021

ಮಾನ್ಯರೆ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರದ ಬಾಲಮಂದಿರ, ವೀಕ್ಷಣಾಲಯ, ಪ್ಲೇಸ್ ಆಫ್ ಸೇಫ್ಟಿ ಹಾಗೂ ಸರ್ಕಾರಿ ಅನುದಾನಿತ ತೆರೆದ ತಂಗುದಾಣ, ಅರ್ಹ ಸಂಸ್ಥೆ ಹಾಗೂ ವಿಶೇಷ ಗೃಹಗಳ ಸಂರಕ್ಷಣೆಯಲ್ಲಿದ್ದ ಮಕ್ಕಳನ್ನು ಸುರಕ್ಷತೆಯ ಕಾರಣದಿಂದ ಬಿಡುಗಡೆ/ರಜೆಯ ಮೇಲೆ ತೆರಳಿದ ಮಕ್ಕಳಿಗೆ ಆರ್ಥಿಕ ಧನ ಸಹಾಯ ನೀಡುವ ಬಗ್ಗೆ.

ಉಲ್ಲೇಖ: 1. ಕೋವಿಡ್-19ರ ಸಂಬಂಧ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 4/2020ರ ಆದೇಶ ದಿನಾಂಕ:03.04.2020 ಮತ್ತು ದಿ: 15.12.2020

2. ನಿರ್ದೇಶನಾಲಯದ ಆದೇಶ ಸಂಖ್ಯೆ: ಕೆಎಸ್ಐಸಿಪಿಎಸ್/ಕೋವಿಡ್-19/132/2020-21, ದಿ:22.01.2021

------

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ, ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆ/ರಜೆಯ ಮೇಲೆ ಪೋಷಕರ ವಶಕ್ಕೆ ತೆರಳಿದ ಮಕ್ಕಳು ಮನೆಯಲ್ಲೇ ಇರುವ ಕಾರಣ ಸರ್ಕಾರದ ಬಾಲಮಂದಿರ, ವೀಕ್ಷಣಾಲಯ ಹಾಗೂ ಪ್ಲೇಸ್ ಆಫ್ ಸೇಫ್ಟಿ ಮತ್ತು ಸರ್ಕಾರಿ ಅನುದಾನಿತ ತೆರೆದ ತಂಗುದಾಣ, ಅರ್ಹ ಸಂಸ್ಥೆ ಹಾಗೂ ವಿಶೇಷ ಗೃಹಗಳಲ್ಲಿ ಸಂರಕ್ಷಣೆಯಲ್ಲಿದ್ದ ಮಕ್ಕಳನ್ನು ಪೋಷಕರ ವಶಕ್ಕೆ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಯ ಆದೇಶದಂತೆ ಬಿಡುಗಡೆ ಅಥವಾ ರಜೆಯ ಮೇಲೆ ತೆರಳಿದ ಮಕ್ಕಳ ಪೋಷಣೆ ಹಾಗೂ ವಿದ್ಯಾಭ್ಯಾಸಕ್ಕಾಗಿ ಸರ್ಕಾರಿ / ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳು ಎಷ್ಟು ತಿಂಗಳು/ದಿನಗಳು ಮನೆಯಲ್ಲಿ ಇದ್ದಾರೋ ಅಷ್ಟು ತಿಂಗಳು/ದಿನಗಳಿಗೆ ಮನೆಯಲ್ಲಿರುವ ಅವಧಿಗೆ ಮಾತ್ರ ಅನ್ವಯವಾಗುವಂತೆ ಆರ್ಥಿಕ ಧನ ಸಹಾಯವನ್ನು ನೀಡಲು ಮಂಜೂರಾತಿ ನೀಡಿ ಉಲ್ಲೇಖ (2)ರ ನಿರ್ದೇಶನಾಲಯದ ಆದೇಶದಲ್ಲಿ ಆದೇಶಿಸಿದೆ **(ಪ್ರತಿ ಲಗತ್ತಿಸಿದೆ)**.

ಆದ್ದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿನ ವಿಚಾರಣೆಯ ಸಮಯದಲ್ಲಿ ಅನುಪಾಲನೆಯನ್ನು ನ್ಯಾಯಾಲಯಕ್ಕೆ ಒದಗಿಸಬೇಕಾಗಿರುವುದರಿಂದ, ಜರೂರಾಗಿ ಹಾಗೂ ಆದ್ಯತೆ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಿ, ಸದರಿ ಅನುದಾನವು ಮಕ್ಕಳಿಗೆ **ದಿ:31.01.2021 ರ ಒಳಗೆ** ತಲುಪುವಂತೆ ಕ್ರಮ ವಹಿಸಲು ಕೋರಿದೆ.

ತಮ್ಮ ವಿಶ್ವಾಸಿ,
22.01.2021

ಶ್ರೀ / ಶ್ರೀಮತಿ ____________
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
__________________ ಜಿಲ್ಲೆ.

**ಕರ್ನಾಟಕ ಸರ್ಕಾರ**

**<u>ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ಇವರು ಹೊರಡಿಸಿರುವ ಕಛೇರಿ ನಡವಳಿಗಳು</u>**

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರದ ಬಾಲಮಂದಿರ, ವೀಕ್ಷಣಾಲಯ, ಪ್ಲೇಸ್ ಆಫ್ ಸೇಫ್ಟಿ ಹಾಗೂ ಸರ್ಕಾರಿ ಅನುದಾನಿತ ತೆರೆದ ತಂಗುದಾಣ, ಅರ್ಹ ಸಂಸ್ಥೆ ಹಾಗೂ ವಿಶೇಷ ಗೃಹಗಳ ಸಂರಕ್ಷಣೆಯಲ್ಲಿದ್ದ ಮಕ್ಕಳನ್ನು ಸುರಕ್ಷತೆಯ ಕಾರಣದಿಂದ ಬಿಡುಗಡೆ/ರಜೆಯ ಮೇಲೆ ತೆರಳಿದ ಮಕ್ಕಳಿಗೆ ಏಪ್ರಿಲ್ 2020 ರಿಂದ ಆಗಸ್ಟ್ 2020ರವರೆಗೆ 5 ತಿಂಗಳಿಗೆ ಆರ್ಥಿಕ ಧನ ಸಹಾಯದಲ್ಲಿನ ವ್ಯತ್ಯಾಸದ ಮೊತ್ತ ಪ್ರತಿ ಮಗುವಿಗೆ, ಮಾಹೆಯಾನ ರೂ. 660/-ರಂತೆ ಮತ್ತು ಸೆಪ್ಟೆಂಬರ್ 2020 ರಿಂದ ಜನವರಿ 2021ರವರೆಗೆ 5 ತಿಂಗಳಿಗೆ ಪ್ರತಿ ಮಗುವಿಗೆ ಮಾಹೆಯಾನ ರೂ. 2160/- ರಂತೆ ಆರ್ಥಿಕ ಧನ ಸಹಾಯ ನೀಡುವ ಬಗ್ಗೆ.

ಉಲ್ಲೇಖ:
1. ಕೋವಿಡ್-19ರ ಸಂಬಂಧ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 4/2020ರ ಆದೇಶ ದಿನಾಂಕ:03.04.2020.
2. ನಿರ್ದೇಶನಾಲಯದ ಆದೇಶ ಸಂಖ್ಯೆ:ಕೆಎಸ್‌ಐಸಿಪಿಎಸ್:ಕೋವಿಡ್-19/2020-21, ದಿನಾಂಕ:04.05.2020.
3. ನಿರ್ದೇಶನಾಲಯದ ಆದೇಶ ಸಂಖ್ಯೆ: ಕೆಎಸ್‌ಐಸಿಪಿಎಸ್:ಕೋವಿಡ್-19/2020-21, ದಿನಾಂಕ:04.08.2020.
4. ಭಾರತ ಸರ್ಕಾರದ ಪತ್ರ ಸಂಖ್ಯೆ:F.No.14-1/2006-CW-II, ದಿ: 15.02.2018

******

**ಪ್ರಸ್ತಾವನೆ:** ಮಾನ್ಯ ಸರ್ವೋಚ್ಚ ನ್ಯಾಯಲಯದ ಆದೇಶದಲ್ಲಿ ಕೋವಿಡ್-19 ಸಂಕ್ರಾಮಿಕ ಮಹಾಮಾರಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ತುರ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ದಿನಾಂಕ:03.04.2020ರಂದು ಉಲ್ಲೇಖ 01ರ ಆದೇಶ ಹೊರಡಿಸಿರುತ್ತದೆ. ಮಕ್ಕಳ ಹಿತದೃಷ್ಟಿಯಿಂದ ಅವರವರ ಕುಟುಂಬ/ ಮನೆಗೆ ಕಳುಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸಹ ತಿಳಿಸಿ ರಾಜ್ಯ ಸರ್ಕಾರಗಳಿಗೆ ಈ ರೀತಿಯ ನಿರ್ದೇಶನ ನೀಡಿರುತ್ತದೆ.

"Ensure availability of adequate food, drinking water and other necessities such as clean clothes, menstrual hygiene products".

ಕೋವಿಡ್-19 ಹಿನ್ನೆಲೆಯಲ್ಲಿ ಸರ್ಕಾರದ ಬಾಲಮಂದಿರ, ವೀಕ್ಷಣಾಲಯ ಹಾಗೂ ಪ್ಲೇಸ್ ಆಫ್ ಸೇಫ್ಟಿ ಮತ್ತು ಸರ್ಕಾರಿ ಅನುದಾನಿತ ತೆರೆದ ತಂಗುದಾಣ, ಅರ್ಹ ಸಂಸ್ಥೆ, ಹಾಗೂ ವಿಶೇಷ ಗೃಹಗಳ ಸಂರಕ್ಷಣೆಯಲ್ಲಿದ್ದ ಮಕ್ಕಳನ್ನು ಪೋಷಕರ ವಶಕ್ಕೆ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಯ ಆದೇಶದಂತೆ ಬಿಡುಗಡೆ ಅಥವಾ ರಜೆಯ ಮೇಲೆ ತೆರಳಿದ ಮಕ್ಕಳ ಪೋಷಣೆಗಾಗಿ 30 ಜಿಲ್ಲೆಯ 2244 ಮಕ್ಕಳಿಗೆ, ಪ್ರತಿ ಮಗುವಿಗೆ, ಮಾಸಿಕ ರೂ. 1500/-ಗಳಂತೆ ಏಪ್ರಿಲ್ ಮತ್ತು ಮೇ-2020ರ ಮಾಹೆಯ ಅವಧಿಗೆ ರೂ. 67,32,000/- ಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಖಾತೆಯಲ್ಲಿ ಲಭ್ಯವಿರುವ ಸಾದಿಲ್ವಾರು ವೆಚ್ಚದಡಿಯಲ್ಲಿ ಭರಿಸಲು ಸೂಚಿಸಿ, ಆರ್ಥಿಕ ಧನ ಸಹಾಯದ ಮಂಜೂರಾತಿ ನೀಡಿ ಉಲ್ಲೇಖ (2)ರಲ್ಲಿ ಆದೇಶಿಸಲಾಗಿದೆ. ಹಾಗೂ ಉಲ್ಲೇಖ (3)ರ ಆದೇಶದಲ್ಲಿ ಜೂನ್ 2020 ರಿಂದ ಆಗಸ್ಟ್ 2020ರ ಮಾಹೆಯವರೆಗೆ ಪ್ರತಿ ಮಗುವಿಗೆ ಮಾಹೆಯಾನ ರೂ. 1500/-ರಂತೆ, ಒಟ್ಟು ರೂ. 1,00,98,000/-ಗಳನ್ನು ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯಲ್ಲಿ ಲಭ್ಯವಿರುವ ಫ್ಲೆಕ್ಸಿ ಫಂಡ್ ಅಡಿಯಲ್ಲಿ ಭರಿಸಲು ಆದೇಶಿಸಲಾಗಿದೆ.

ಮುಂದುವರೆದು, ಸಂಸ್ಥೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಯ Section No. V, Annexure X, Table 3(B)ರ ಪ್ರಕಾರ ಹಾಗೂ ಉಲ್ಲೇಖ (4)ರ ಭಾರತ ಸರ್ಕಾರದ ಪತ್ರದಂತೆ, ಪ್ರತಿ ಸಂಸ್ಥೆಗೆ ಆವರ್ತಕ ವೆಚ್ಚದಡಿಯಲ್ಲಿ ಮಕ್ಕಳ ಊಟೋಪಚಾರ ಹಾಗೂ ಔಷಧೋಪಚಾರಕ್ಕಾಗಿ ತಿಂಗಳಿಗೆ ರೂ. 2,160/- (ಊಟೋಪಚಾರಕ್ಕಾಗಿ ರೂ. 1512/- ಹಾಗೂ ಔಷಧೋಪಚಾರ ಹಾಗೂ ಇತರೆ ವೆಚ್ಚಕ್ಕಾಗಿ ರೂ. 648/-) ಭರಿಸಲು ಅವಕಾಶವಿದೆ (Maintenance @ Rs. 2000/- per child per month (Food @ Rs. 1400/- and Rs. 600/- for clothing, medicine, soap, oil etc., enhanced by 8%)).

ಆದ್ದರಿಂದ, ಪ್ರಸ್ತುತವು ಸಹಾ ಕೋವಿಡ್-19ರ ಹಿನ್ನೆಲೆಯಲ್ಲಿ ಪೋಷಕರ ವಶಕ್ಕೆ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಯ ಆದೇಶದಂತೆ ಬಿಡುಗಡೆ ಅಥವಾ ರಜೆಯ ಮೇಲೆ ತೆರಳಿದ ಮಕ್ಕಳು ಮನೆಯಲ್ಲೇ ಮುಂದುವರೆದಿದ್ದು, ಅವರ ಪೋಷಣೆಯ ಹೊರೆ ಕುಟುಂಬಗಳ ಮೇಲೆ ಬಿದ್ದಿದ್ದು, ಕುಟುಂಬಗಳ ಆರ್ಥಿಕ ಪರಿಸ್ಥಿತಿ ಕುಸಿಯುತ್ತಿರುವುದರಿಂದ ಮಕ್ಕಳ ಪೋಷಣೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ಧಕ್ಕೆ ಆಗದಂತೆ ಕ್ರಮವಹಿಸಬೇಕಾಗಿದೆ. **ಮಕ್ಕಳು ಬಾಲಮಂದಿರದಲ್ಲೇ ಇದ್ದಲ್ಲಿ, ಸದರಿಯವರ ಪಾಲನೆ ಮತ್ತು ರಕ್ಷಣೆ ಸರ್ಕಾರದ ಜವಾಬ್ದಾರಿಯಾಗಿರುವುದರಿಂದ** ಹಿಂದೆ ಏಪ್ರಿಲ್ 2020 ರಿಂದ ಆಗಸ್ಟ್ 2020ರವರೆಗೆ ನೀಡಿದ್ದ ಆರ್ಥಿಕ ಧನ ಸಹಾಯದಲ್ಲಿ ವ್ಯತ್ಯಾಸದ ಮೊತ್ತ ಪ್ರತಿ ಮಗುವಿಗೆ ಮಾಹೆಯಾನ ರೂ. 660/-(ರೂ. 2160 - ರೂ. 1500) ರಂತೆ ಒಟ್ಟು ರೂ. 74,05,200/- ಹಾಗೂ ಸೆಪ್ಟಂಬರ್ 2020 ರಿಂದ ಜನವರಿ 2021ರವರೆಗೆ ಒಟ್ಟು 5 ತಿಂಗಳಿಗೆ 30 ಜಿಲ್ಲೆಗಳ 156 ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳ 2244 ಮಕ್ಕಳಿಗೆ ಪ್ರತಿ ಮಗುವಿಗೆ ಮಾಹೆಯಾನ ರೂ. 2,160/- ರಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಒಟ್ಟು ರೂ. 2,42,35,200/- ಗಳ ಆರ್ಥಿಕ ಧನ ಸಹಾಯ ನೀಡಲು ತೀರ್ಮಾನಿಸಿದ್ದು, ಒಟ್ಟು ರೂ. 3,16,40,400/- (ರೂ. ಮೂರು ಕೋಟಿ ಹದಿನಾರು ಲಕ್ಷದ ನಲವತ್ತು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸಂಖ್ಯೆ: ಕೆಎಸ್‌ಪಿಸಿಪಿಎಸ್/ಕೋವಿಡ್-19/132/2020-21

ನಿರ್ದೇಶಕರ ಕಛೇರಿ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು, ದಿನಾಂಕ: 22.01.2021

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ, ಕೋವಿಡ್-19ರ ಹಿನ್ನೆಲೆಯಲ್ಲಿ **ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಿಂದ** ಬಿಡುಗಡೆ/ರಜೆಯ ಮೇಲೆ ಪೋಷಕರ ವಶಕ್ಕೆ ತೆರಳಿದ ಮಕ್ಕಳು ಮನೆಯಲ್ಲೇ ಇರುವ ಕಾರಣ ಸರ್ಕಾರದ ಬಾಲಮಂದಿರ, ವೀಕ್ಷಣಾಲಯ ಹಾಗೂ ಪ್ಲೇಸ್ ಆಫ್ ಸೇಫ್ಟಿ ಮತ್ತು ಸರ್ಕಾರಿ ಅನುದಾನಿತ ತೆರೆದ ತಂಗುದಾಣ, ಅರ್ಹ ಸಂಸ್ಥೆ ಹಾಗೂ ವಿಶೇಷ ಗೃಹಗಳಲ್ಲಿ ಸಂರಕ್ಷಣೆಯಲ್ಲಿದ್ದ ಮಕ್ಕಳನ್ನು ಪೋಷಕರ ವಶಕ್ಕೆ **ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಯ ಆದೇಶದಂತೆ** ಬಿಡುಗಡೆ ಅಥವಾ ರಜೆಯ ಮೇಲೆ ತೆರಳಿದ ಮಕ್ಕಳ ಪೋಷಣೆ ಹಾಗೂ ವಿದ್ಯಾಭ್ಯಾಸಕ್ಕಾಗಿ ಸರ್ಕಾರಿ / ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ **ಮಕ್ಕಳು ಎಷ್ಟು ತಿಂಗಳು/ದಿನಗಳು ಮನೆಯಲ್ಲಿ ಇದ್ದಾರೋ ಅಷ್ಟು ತಿಂಗಳು/ದಿನಗಳಿಗೆ ಮನೆಯಲ್ಲಿರುವ ಅವಧಿಗೆ ಮಾತ್ರ ಅನ್ವಯವಾಗುವಂತೆ** ಅನುಬಂಧದಲ್ಲಿ ವಿವರಿಸಿರುವಂತೆ ಕೆಳಗಿನಂತೆ ಆರ್ಥಿಕ ಧನ ಸಹಾಯವನ್ನು ನೀಡಲು ಮಂಜೂರಾತಿ ನೀಡಿ ಆದೇಶಿಸಿದೆ.

1. ಏಪ್ರಿಲ್ 2020 ರಿಂದ ಆಗಸ್ಟ್ 2020ನೇ ಮಾಹೆಯವರೆಗೆ ಆರ್ಥಿಕ ಧನ ಸಹಾಯದ ವ್ಯತ್ಯಾಸದ ಮೊತ್ತ ಪ್ರತಿ ಮಗುವಿಗೆ ಮಾಹೆಯಾನ ರೂ. 660/- (ರೂ. 2160-1500) ರಂತೆ 30 ಜಿಲ್ಲೆಯ 156 ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳ 2244 ಮಕ್ಕಳಿಗೆ ಅನುಬಂಧದಲ್ಲಿ ವಿವರಿಸಿದಂತೆ, **ರೂ. 74,05,200/- ಗಳನ್ನು** ಹಾಗೂ
2. ಪ್ರತಿ ಮಗುವಿಗೆ, ಮಾಸಿಕ ರೂ. 2,160/-ಗಳಂತೆ ಸೆಪ್ಟಂಬರ್ 2020 ರಿಂದ ಜನವರಿ 2021 ರ ಮಾಹೆಯವರೆಗೆ 30 ಜಿಲ್ಲೆಗಳ 2244 ಮಕ್ಕಳಿಗೆ ಅನುಬಂಧದಲ್ಲಿ ವಿವರಿಸಿರುವಂತೆ **ರೂ. 2,42,35,200/- ಗಳನ್ನು** ಒಟ್ಟು ರೂ. **3,16,40,400/- (ಒಟ್ಟು ಮೂರು ಕೋಟಿ ಹದಿನಾರು ಲಕ್ಷದ ನಲವತ್ತು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ)**
3. **ಮೇಲಿನಂತೆ ರೂ. 3,16,40,400/- (ಒಟ್ಟು ಮೂರು ಕೋಟಿ ಹದಿನಾರು ಲಕ್ಷದ ನಲವತ್ತು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳ ಗರಿಷ್ಟ ಮಿತಿಗೆ ಅನುಮತಿ ನೀಡಿದ್ದು, ಇದರಲ್ಲಿ ವಾಸ್ತವವಾಗಿ ಅರ್ಹತೆಯ ಆಧಾರದ ಮೇರೆಗೆ ಮಾತ್ರ ಅನುದಾನವನ್ನು ಬಳಸುವುದು.**

ಮೇಲಿನ ಅನುದಾನವನ್ನು ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಂದ **ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಯ ಆದೇಶದಂತೆ** ಬಿಡುಗಡೆ / ರಜೆಯ ಮೇಲೆ ತೆರಳಿದ ಮಕ್ಕಳಿಗೆ ಲೆಕ್ಕಶೀರ್ಷಿಕೆ 2235-02-102-0-36 ಉಪಶೀರ್ಷಿಕೆ 221 ಅಡಿಯಲ್ಲಿ ಖಜಾನೆ ಮುಖಾಂತರ ಪಿ.ಎಫ್.ಎಂ.ಎಸ್. ಮೂಲಕ ಮತ್ತು ಸರ್ಕಾರಿ ಅನುದಾನಿತ ಸಂಸ್ಥೆಗಳಿಂದ **ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಯ ಆದೇಶದಂತೆ** ಬಿಡುಗಡೆ/ರಜೆಯ ಮೇಲೆ ತೆರಳಿದ ಮಕ್ಕಳಿಗೆ ಪ್ರಧಾನ ಕಛೇರಿಯಿಂದ ಬಿಡುಗಡೆ ಮಾಡಿ ಉಳಿಕೆಯಾಗಿರುವ ಮೊತ್ತದಿಂದ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ

ಮಕ್ಕಳ ಬ್ಯಾಂಕ್ ಖಾತೆಗೆ **ಒಂದು ವೇಳೆ ಮಕ್ಕಳಿಗೆ ಅವರದೇ ಆದ ಬ್ಯಾಂಕ್ ಖಾತೆ ಇಲ್ಲದಿದ್ದಲ್ಲಿ ಪೋಷಕರ ಬ್ಯಾಂಕ್ ಖಾತೆಗೆ (ಆದ್ಯತೆ ಮೇರೆಗೆ ತಾಯಿಯ ಬ್ಯಾಂಕ್ ಖಾತೆಗೆ) ಜಮಾ ಮಾಡಲು ಕ್ರಮ ವಹಿಸತಕ್ಕದ್ದು.**

ಮುಂದುವರಿದಂತೆ, ಮೇಲೆ ತಿಳಿಸಲಾದ 2244 ಮಕ್ಕಳಲ್ಲಿ ಫೆಬ್ರವರಿ 2021 ಮತ್ತು ಮಾರ್ಚ್ 2021 ಮಾಹೆಗಳಲ್ಲಿ ಮಕ್ಕಳು **ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಪಾಲನಾ ಸಂಸ್ಥೆಗಳಿಗೆ** ಪೋಷಕರ ವಶದಿಂದ ಹಿಂತಿರುಗದಿದ್ದಲ್ಲಿ, ಸದರಿ ಮಾಹೆಗಳಲ್ಲಿಯೂ ಸಹಾ ಪ್ರತಿ ಮಗುವಿಗೆ ಮಾಹೆಯಾನ ರೂ. 2,160/- ರಂತೆ ಮಕ್ಕಳ ಬ್ಯಾಂಕ್ ಖಾತೆಗೆ **ಒಂದು ವೇಳೆ ಮಕ್ಕಳಿಗೆ ಅವರದೇ ಆದ ಬ್ಯಾಂಕ್ ಖಾತೆ ಇಲ್ಲದಿದ್ದಲ್ಲಿ ಪೋಷಕರ ಬ್ಯಾಂಕ್ ಖಾತೆಗೆ (ಆದ್ಯತೆ ಮೇರೆಗೆ ತಾಯಿಯ ಬ್ಯಾಂಕ್ ಖಾತೆಗೆ) ಜಮಾ ಮಾಡಲು ಕ್ರಮ ವಹಿಸತಕ್ಕದ್ದು.**

**ಷರತ್ತುಗಳು:**

1. ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಗಳ ಮೂಲಕ ದಾಖಲಾಗಿ ಕೋವಿಡ್ ತುರ್ತು ಪರಿಸ್ಥಿತಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಗಳ ಆದೇಶವಿಲ್ಲದೆ ಕುಟುಂಬಕ್ಕೆ ತೆರಳಿರುವ ಮಕ್ಕಳ ಹೆಸರುಗಳನ್ನು ಪ್ರಸ್ತುತ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಗಳ ಮೂಲಕ ಘಟನೋತ್ತರ ಮಂಜೂರಾತಿ ಪಡೆದು ಸ್ಥಿರೀಕರಿಸಿ (ratification) ಸದರಿ ಮಕ್ಕಳಿಗೆ ಮೇಲಿನಂತೆ ಆರ್ಥಿಕ ನೆರವನ್ನು ಒದಗಿಸುವುದು. ಒಂದು ವೇಳೆ ಈ ರೀತಿ ಸ್ಥಿರೀಕರಿಸಿದ ನಂತರ ಏಪ್ರಿಲ್ ನಿಂದ ಆಗಸ್ಟ್ ತಿಂಗಳಿಗೂ ಸಹಾ ಆರ್ಥಿಕ ನೆರವನ್ನು ನೀಡಬೇಕಾದ ಮಕ್ಕಳಿದ್ದಲ್ಲಿ ಮಾಹೆಯಾನ ರೂ. 2160/- ರಂತೆ ಏಪ್ರಿಲ್ 2020 ರಿಂದ ಆಗಸ್ಟ್ 2020 ರವರೆಗೂ ಸಹಾ ಅನುದಾನ ಸದರಿ ಮಕ್ಕಳಿಗೆ ಒದಗಿಸುವುದು. **ಆದರೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗುವಾಗ ಮಕ್ಕಳ ಕಲ್ಯಾಣ ಸಮಿತಿ / ಬಾಲನ್ಯಾಯ ಮಂಡಳಿಗಳ ಮೂಲಕ ದಾಖಲಾಗದ ಮಕ್ಕಳಿಗೆ ಯಾವುದೇ ಆರ್ಥಿಕ ನೆರವನ್ನು ಒದಗಿಸಲು ಬರುವುದಿಲ್ಲ.**

2. ಎ) ಜಿಲ್ಲೆಯಲ್ಲಿರುವ **ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳ ಮಕ್ಕಳಿಗೆ** ಪಾವತಿಸಬೇಕಾದ ಮೊತ್ತವನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕ್ರೋಢೀಕರಿಸಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದ ನಂತರ ಸಂಬಂಧಪಟ್ಟ ಮಕ್ಕಳ ಪಾಲನಾ ಸಂಸ್ಥೆಗಳಿಂದ ಉಪಶೀರ್ಷಿಕೆ 221 ರಡಿಯಲ್ಲಿ **ಪಿ.ಎಫ್.ಎಂ.ಎಸ್. ಮೂಲಕ** ಟ್ರೆಸರಿಯಿಂದ ನೇರವಾಗಿ **ಮಕ್ಕಳ ಬ್ಯಾಂಕ್ ಖಾತೆಗೆ ಒಂದು ವೇಳೆ ಮಕ್ಕಳಿಗೆ ಅವರದೇ ಆದ ಬ್ಯಾಂಕ್ ಖಾತೆ ಇಲ್ಲದಿದ್ದಲ್ಲಿ ಪೋಷಕರ ಬ್ಯಾಂಕ್ ಖಾತೆಗೆ (ಆದ್ಯತೆ ಮೇರೆಗೆ ತಾಯಿಯ ಬ್ಯಾಂಕ್ ಖಾತೆಗೆ) ಜಮಾ ಮಾಡಲು** ಸಂಬಂಧಪಟ್ಟ ಅಧೀಕ್ಷಕರು ಕ್ರಮವಹಿಸುವುದು.

ಬಿ) **ಸರ್ಕಾರಿ ಅನುದಾನಿತ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳ ಅರ್ಹ ಮಕ್ಕಳ ಮಾಹಿತಿಯನ್ನು** ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕ್ರೋಢೀಕರಿಸಿ ಅನುದಾನಕ್ಕೆ ಜಿಲ್ಲಾಧಿಕಾರಿಗಳ ಅನುಮತಿ ಪಡೆದ ನಂತರ ಈಗಾಗಲೇ ಇದೇ ಉದ್ದೇಶಕ್ಕೆ ಪ್ರಧಾನ ಕಛೇರಿಯಿಂದ ಬಿಡುಗಡೆ ಮಾಡಿ ಉಳಿಕೆಯಾದ ಫ್ಲೆಕ್ಸಿ ಫಂಡ್ ಅನುದಾನದ ಅಡಿಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಬ್ಯಾಂಕ್ ಖಾತೆಯಿಂದ **ಆರ್.ಟಿ.ಜಿ.ಎಸ್. ಮೂಲಕ** ನೇರವಾಗಿ **ಮಕ್ಕಳ ಬ್ಯಾಂಕ್ ಖಾತೆಗೆ ಒಂದು ವೇಳೆ ಮಕ್ಕಳಿಗೆ ಅವರದೇ ಆದ ಬ್ಯಾಂಕ್ ಖಾತೆ ಇಲ್ಲದಿದ್ದಲ್ಲಿ ಪೋಷಕರ ಬ್ಯಾಂಕ್ ಖಾತೆಗೆ (ಆದ್ಯತೆ ಮೇರೆಗೆ ತಾಯಿಯ ಬ್ಯಾಂಕ್ ಖಾತೆಗೆ)** ಜಮಾ ಮಾಡಲು ಕ್ರಮವಹಿಸುವುದು.

3. ಸರ್ಕಾರಿ / ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳು **ಎಷ್ಟು ತಿಂಗಳು/ದಿನಗಳು ಮನೆಯಲ್ಲಿ ಇದ್ದಾರೋ ಅಷ್ಟು ತಿಂಗಳು/ದಿನಗಳಿಗೆ** ಮನೆಯಲ್ಲಿರುವ ಅವಧಿಗೆ ಮಾತ್ರ ಅನ್ವಯವಾಗುವಂತೆ, ಅವರಿಗೆ ಅನುದಾನವನ್ನು ಪಾವತಿಸುವುದು.

4. ಅನುದಾನ ಬಿಡುಗಡೆ ಮಾಡಿರುವ ಮಾಹಿತಿಯನ್ನು ಮಗು / ಕುಟುಂಬಕ್ಕೆ ದೂರವಾಣಿ ಮೂಲಕ ನೀಡುವುದು.

5. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಪಿ.ಎಫ್.ಎಂ.ಎಸ್./ಆರ್.ಟಿ.ಜಿ.ಎಸ್. ಮಾಡಿದ ನಂತರ ಯು.ಟಿ.ಆರ್. ನಂಬರ್‌ನೊಂದಿಗೆ ಮಾಹಿತಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.

6. ಎಲ್ಲಾ ಮಕ್ಕಳಿಗೂ ಅನುದಾನವನ್ನು ಪಾವತಿಸಿದ ನಂತರ, ಪ್ರಧಾನ ಕಛೇರಿಯಿಂದ ಚೆಕ್ ಮೂಲಕ ನೀಡಿರುವ ಮೊತ್ತದಲ್ಲಿ ಉಳಿಕೆಯಾದಲ್ಲಿ, ಅದನ್ನು ಪ್ರಧಾನ ಕಛೇರಿಗೆ ಮಾರ್ಚ್ 31ರ ಒಳಗೆ ಚೆಕ್ ಮೂಲಕ ಹಿಂತಿರುಗಿಸುವುದು.

(ಟಿಪ್ಪಣಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಂದ ಅನುಮೋದಿಸಲ್ಪಟ್ಟಿದೆ)

22.01.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:

1. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
2. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ.
3. ಎಲ್ಲಾ ಜಿಲ್ಲೆಗಳ ಅಧೀಕ್ಷಕರು, ಸರ್ಕಾರಿ ಬಾಲಕಿಯರ ಮತ್ತು ಬಾಲಕರ ಬಾಲಮಂದಿರ
4. ಲೆಕ್ಕಾಧಿಕಾರಿಗಳು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಪ್ರಧಾನ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ
5. ಕಛೇರಿ ಪ್ರತಿ.

**ಆದೇಶ ಸಂಖ್ಯೆ: ಕೆಎಸ್‌ಐಸಿಪಿಎಸ್/ಕೋವಿಡ್-19/132/2020-21, ದಿ: 22.01.2021 ಕ್ಕೆ ಅನುಬಂಧ**

(ರೂ. ಗಳಲ್ಲಿ)

| ಕ್ರ.ಸಂ | ಜಿಲ್ಲೆಗಳ ಹೆಸರು | ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳ ಸಂಖ್ಯೆ | ಕೋವಿಡ್-19ರ ಕಾರಣ ಸಂಸ್ಥೆಗಳಿಂದ ಬಿಡುಗಡೆ/ರಜೆ ಮೇಲೆ ತೆರಳಿದ ಮಕ್ಕಳ ಸಂಖ್ಯೆ | ಏಪ್ರಿಲ್ 2020 ರಿಂದ ಆಗಸ್ಟ್ 2020ನೇ ಮಾಹೆಯವರೆಗೆ 5 ತಿಂಗಳಿಗೆ ಆರ್ಥಿಕ ಧನ ಸಹಾಯದ ವ್ಯತ್ಯಾಸದ ಮೊತ್ತ ಪ್ರತಿ ಮಗುವಿಗೆ ಮಾಹೆಯಾನ ರೂ. 660/- (ರೂ. 2160-1500)ರಂತೆ ನೀಡಲು ಮಂಜೂರಾತಿ ನೀಡಿದ ಮೊತ್ತ | ಸೆಪ್ಟಂಬರ್ 2020 ರಿಂದ ಜನವರಿ 2021ರ ಮಾಹೆಯವರೆಗೆ 5 ತಿಂಗಳಿಗೆ ಪ್ರತಿ ಮಗುವಿಗೆ ಮಾಹೆಯಾನ ರೂ. 2160/-ಗಳಂತೆ ಆರ್ಥಿಕ ಧನ ಸಹಾಯ ನೀಡಲು ಮಂಜೂರಾತಿ ನೀಡಿದ ಮೊತ್ತ | ಆರ್ಥಿಕ ಧನ ಸಹಾಯ ನೀಡಲು ಮಂಜೂರಾತಿ ನೀಡಿದ ಒಟ್ಟು ಮೊತ್ತ |
|---|---|---|---|---|---|---|
| 1 | ಬಾಗಲಕೋಟೆ | 6 | 118 | 389400 | 1274400 | 1663800 |
| 2 | ಬೆಳಗಾವಿ | 8 | 117 | 386100 | 1263600 | 1649700 |
| 3 | ವಿಜಯಪುರ | 11 | 234 | 772200 | 2527200 | 3299400 |
| 4 | ಧಾರವಾಡ | 7 | 120 | 396000 | 1296000 | 1692000 |
| 5 | ಗದಗ | 3 | 92 | 303600 | 993600 | 1297200 |
| 6 | ಹಾವೇರಿ | 6 | 124 | 409200 | 1339200 | 1748400 |
| 7 | ಉತ್ತರ ಕನ್ನಡ | 4 | 45 | 148500 | 486000 | 634500 |
| 8 | ಶಿವಮೊಗ್ಗ | 5 | 113 | 372900 | 1220400 | 1593300 |
| 9 | ಬೆಂಗಳೂರು (ಗ್ರಾ) | 8 | 90 | 297000 | 972000 | 1269000 |
| 10 | ರಾಮನಗರ | 3 | 46 | 151800 | 496800 | 648600 |
| 11 | ಚಿಕ್ಕಬಳ್ಳಾಪುರ | 3 | 40 | 132000 | 432000 | 564000 |
| 12 | ಚಿತ್ರದುರ್ಗ | 5 | 64 | 211200 | 691200 | 902400 |
| 13 | ದಾವಣಗೆರೆ | 8 | 104 | 343200 | 1123200 | 1466400 |
| 14 | ಕೋಲಾರ | 4 | 19 | 62700 | 205200 | 267900 |
| 15 | ಬೆಂಗಳೂರು (ನ) | 19 | 102 | 336600 | 1101600 | 1438200 |
| 16 | ತುಮಕೂರು | 3 | 36 | 118800 | 388800 | 507600 |
| 17 | ಬಳ್ಳಾರಿ | 5 | 99 | 326700 | 1069200 | 1395900 |
| 18 | ಬೀದರ್ | 4 | 102 | 336600 | 1101600 | 1438200 |
| 19 | ಕಲಬುರ್ಗಿ | 9 | 103 | 339900 | 1112400 | 1452300 |
| 20 | ಕೊಪ್ಪಳ | 3 | 81 | 267300 | 874800 | 1142100 |
| 21 | ರಾಯಚೂರು | 3 | 82 | 270600 | 885600 | 1156200 |
| 22 | ಯಾದಗಿರಿ | 1 | 10 | 33000 | 108000 | 141000 |
| 23 | ಚಾಮರಾಜನಗರ | 3 | 9 | 29700 | 97200 | 126900 |
| 24 | ಚಿಕ್ಕಮಗಳೂರು | 3 | 30 | 99000 | 324000 | 423000 |
| 25 | ದಕ್ಷಿಣ ಕನ್ನಡ | 3 | 51 | 168300 | 550800 | 719100 |
| 26 | ಹಾಸನ | 6 | 64 | 211200 | 691200 | 902400 |
| 27 | ಕೊಡಗು | 2 | 38 | 125400 | 410400 | 535800 |
| 28 | ಮಂಡ್ಯ | 4 | 30 | 99000 | 324000 | 423000 |
| 29 | ಮೈಸೂರು | 4 | 72 | 237600 | 777600 | 1015200 |
| 30 | ಉಡುಪಿ | 3 | 9 | 29700 | 97200 | 126900 |
| | ಒಟ್ಟು ರೂ | 156 | 2244 | 7405200 | 24235200 | 31640400 |

**( ರೂ. ಮೂರು ಕೋಟಿ ಹದಿನಾರು ಲಕ್ಷದ ನಲವತ್ತು ಸಾವಿರದ ನಾಲ್ಕು ನೂರು ರೂಪಾಯಿಗಳ ಗರಿಷ್ಟ ಮಿತಿಗೆ ಅನುಮತಿ ನೀಡಿದ್ದು, ಇದರಲ್ಲಿ ವಾಸ್ತವವಾಗಿ ಅರ್ಹತೆಯ ಆಧಾರದ ಮೇರೆಗೆ ಮಾತ್ರ ಅನುದಾನವನ್ನು ಬಳಸುವುದು).**

(ಟಿಪ್ಪಣಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಂದ ಅನುಮೋದಿಸಲ್ಪಟ್ಟಿದೆ)

22.01.2021

ನಿರ್ದೇಶಕರು

ಮಕ್ಕಳ ರಕ್ಷಣಾ ನಿರ್ದೇಶನಾಲಯ

ಬೆಂಗಳೂರು